ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 2, Sep-Oct 2022, Pp. 68-76.
©*IIMRD*, Mysuru

IIMRD JOURNALS

www.iimrd.com

# ಜನಪದ ದೈವ ಮಾಟುರಣ್ಣ: ಸಾಂಸ್ಕೃತಿಕ ಅನನ್ಯತೆ

**ನಾಗೇಶ್ ಪೂಜಾರ್***

*ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

***ಸಾರಾಂಶ: (Abstract)***

*ನಮ್ಮ ಜನಪದರು ಹಿಂದಿನಿಂದಲೂ ಅನುಸರಿಸಿಕೊಂಡು ಬಂದ ಆಚರಣೆಗಳು, ಸಂಪ್ರದಾಯಗಳು, ಅವುಗಳ ನಂಬಿಕೆಗಳು, ತುಂಬಾ ಮೌಲ್ಯಯುತವಾದ ಅಂಶಗಳಾಗಿವೆ. ಭಾರತದಂತಹ ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿದ ದೇಶದಲ್ಲಿ ದೇಶದ ಉದ್ದಗಲಕ್ಕೂ ಪ್ರತಿ ಹಳ್ಳಿಯಿಂದ ದಿಲ್ಲಿಯ ತನಕ ಹಲವಾರು ದೈವಗಳನ್ನು, ಕಾಣುತ್ತೇವೆ. ಸಾಂಸ್ಕೃತಿಕವಾಗಿ ಶ್ರೀಮಂತಿಕೆಯಿಂದ ಕೂಡಿದ ದೈವಗಳು ಸಿರಿ ಸಂಪತ್ತಿನಿಂದ ಅಲಂಕಾರಗೊಂಡ ದೈವಗಳು, ಮುಂತಾದ ವೈವಿಧ್ಯಮಯ, ದೈವಗಳನ್ನ ಕಾಣುವ ನಾವುಗಳು, ಅಲಕ್ಷಿತವಾಗಿ ಉಳಿದುಕೊಂಡು ಬಂದಿರುವ ದೈವಗಳನ್ನು ಬಹುತೇಕವಾಗಿ ಮರದ ಕೆಳಗೆ, ಗುಡ್ಡ ಬೆಟ್ಟಗಳ ಮೇಲೆ ರೂಪಗೊಂಡಿರುವ ದೈವಗಳು, ನಮ್ಮ ಜನಪದರಿಂದ ದೂರ ಉಳಿದಿವೆ. ಇಂತಹ ಅಲಕ್ಷೀತ ದೈವಗಳ ಬಗೆಗೆ ಅವುಗಳನ್ನು ಶಿಷ್ಟ ಸಾಹಿತ್ಯದ ಕಡೆಗೆ ಅಂದರೆ ಅಂತಹ ದೈವಗಳ ಬಗ್ಗೆ ಲಿಖಿತವಾದ ದಾಖಲೆಯನ್ನು ಮಾಡಿ ಅವುಗಳನ್ನು ಕೂಡ ನಮ್ಮ ಜನಪದರು, ಆರಾಧನೆಗೆ ಒಳ ಪಡಿಸುವ ನಿಟ್ಟಿನಲ್ಲಿ ಅಧ್ಯಯನವಾಗಬೇಕಿದೆ, ನಮ್ಮ ಜನಪದ ಸಂಸ್ಕೃತಿ ಹಲವಾರು ಆಯಾಮಗಳನ್ನು ಹೊತ್ತುಕೊಂಡು, ಇತರಹದ ಅಧ್ಯಯನಗಳಿಗೆ, ಹಲವು ಮಗ್ಗಲುಗಳಲ್ಲಿ ಪೂರಕವಾಗಿ ನಿಂತಿವೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಜನಪದ ದೈವ ಮಟೂರಣ್ಣರವರ ಸಾಂಸ್ಕೃತಿಕ ಅನನ್ಯತೆ ಬಗ್ಗೆ ವಿವರಿಸಲಾಗಿದೆ.*

***ಮುಖ್ಯಪದಗಳು (Keywords):*** *ಜನಪದ, ಜಾನಪದ, ದೇವರು, ಮಾಟೂರಣ್ಣ, ಸಂಸ್ಕೃತಿ, ಪರಂಪರೆ.*

**ಪೀಠಿಕೆ**

ಜನಪದ ಸಂಸ್ಕೃತಿಯಲ್ಲಿ ಪ್ರಮುಖ ದೈವವಾದ ಮಾಟೂರಣ್ಣ ದೈವವು ಕನಕಗಿರಿ ಪರಿಸರದಲ್ಲಿ ಕಂಡು ಬರುವ ಪ್ರಮುಖ ಆರಾಧ್ಯ ದೈವವಾಗಿದೆ. ಚಾರಿತ್ರಿಕವಾಗಿ ಐತಿಹಾಸಿಕವಾಗಿ ತನ್ನದೇ ಆದ ವಿಶಿಷ್ಟ ಪರಂಪರೆ ಹೊಂದಿದ ಕನಕಗಿರಿಯು ಧಾರ್ಮಿಕವಾಗಿ ನಾಡಿನಾದ್ಯಂತ ಪ್ರಸಿದ್ಧವಾಗಿದೆ. 'ಕಣ್ಣಿದ್ದರೆ ಕನಕಗಿರಿ ನೋಡಬೇಕು, ಕಾಲಿದ್ದರೆ ಹಂಪಿ ನೋಡಬೇಕು.' ಎನ್ನುವ ಪ್ರಸಿದ್ಧ ನಾನ್ನುಡಿಗೆ ಸಾಕ್ಷಿ ಎಂಬಂತೆ ಕನಕಗಿರಿಯಲ್ಲಿ 701 ಬಾವಿ 701 ದೇವಸ್ಥಾನಗಳು ಇವೆ ಎಂಬುದು ತುಂಬಾ ಪ್ರಾಚೀನದಿಂದ ಬಂದ ನಂಬಿಕೆಯಾಗಿದೆ. ಈ ನಂಬಿಕೆಗೆ ಪುಷ್ಠಿ ನೀಡುವಂತೆ ಕನಕಗಿರಿಯಲ್ಲಿ ಕಂಡು ಬರುವ ಪ್ರಮುಖ ಜನಪದ ದೈವವಾಗಿದೆ. ಈ ದೈವಕ್ಕೆ ಸಹಜವಾಗಿ ಇರುವ ಲಕ್ಷಣಗಳನ್ನು ಗಮನಿಸಿದರೆ ಸಾಂಸ್ಕೃತಿಕ ನಾಯಕ ಎಂಬುವದರಲ್ಲಿ ಸಂಶಯವಿಲ್ಲ ಆದರೆ ಅದಕ್ಕೆ ಇನ್ನೂ ಗಟ್ಟಿಯಾದ ಆಕಾರಗಳು ಸಿಗುವ ನಿಟ್ಟಿನಲ್ಲಿ ಸಂಶೋಧನೆಯಾಗಬೇಕಿದೆ.

***Please cite this article as:*** ನಾಗೇಶ್ ಪೂಜಾರ್. (2022). ಜನಪದ ದೈವ ಮಾಟೂರಣ್ಣ ಸಾಂಸ್ಕೃತಿಕ ಅನನ್ಯತೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(2). ಪು.ಸಂ. 68–76.*

ಕನಕಗಿರಿ ಪರಿಸರದಲ್ಲಿ ಹಲವಾರು ಹಳ್ಳಿಗಳಲ್ಲಿ ಈ ದೈವವು ಅಲಕ್ಷಿತವಾಗಿ ಉಳಿದುಕೊಂಡು, ಬಂದಿದೆ. ಕಾರಣ ಈ ದೈವವು ತಳ ಸಮುದಾಯಗಳ ಆರಾಧನೆಯಲ್ಲಿರುವುದರಿಂದ ಸಹಜವಾಗಿಯೇ ಅಲಕ್ಷಿತಕ್ಕೆ ಒಳಗಾಗಿರಬಹುದು ಎನ್ನಬಹುದು. ಕನಕಗಿರಿಯಲ್ಲಿರುವ ಈ ದೈವವು ಹಲವಾರು ಸಂಪ್ರದಾಯ ಆಚರಣೆಗಳಿಂದ ನಮ್ಮ ಜನಪದರಲ್ಲಿ ಬಲವಾದ ನಂಬಿಕೆಯನ್ನು ಉಳಿಸಿಕೊಂಡು ಬಂದಿದೆ. ಸಹಜವಾಗಿ ಈ ಒಂದು ಲೇಖನದಲ್ಲಿ ಜನಪದ ದೃಷ್ಠಿಯಿಂದ ನೋಡುವುದಾದರೆ, ಒಂದು ಆಯಾಮದಲ್ಲಿ ದೈವವಾಗಿ ಕಂಡು ಬಂದಿದೆ. ಇನ್ನೊಂದು ಆಯಾಮದಲ್ಲಿ ಸಾಂಸ್ಕೃತಿಕ ನಾಯಕನ ಬಗೆಗೆ ಇರಬೇಕಾದ ಲಕ್ಷಣವನ್ನು ಗಮನಿಸಿ ಅದಕ್ಕೆ ಬೇಕಾದ ಮಾಹಿತಿಯನ್ನು ಕನಕಗಿರಿ ಪರಿಸರದ ಹಲವಾರು ಕಡೆ ಕ್ಷೇತ್ರ ಕಾರ್ಯವನ್ನು ಮಾಡುವುದರ ಮೂಲಕ ಆಕಾರವನ್ನು ಒದಗಿಸಿದ್ದೇನೆ. ಈ ಬಗೆಗಿನ ಅಧ್ಯಯನಕ್ಕೆ ಯಾವುದೇ ರೀತಿಯ ಲಿಖಿತ ದಾಖಲಾತಿಗಳು ಇಲ್ಲಾ ಬದಲಿಗೆ ಮೌಖಿಕವಾದ ಸಾಹಿತ್ಯದಿಂದ ಅಧ್ಯಯನಕ್ಕೆ ಬೆಳಕು ಚೆಲ್ಲಲಾಗಿದೆ.

**ಮೌಖಿಕ ಹಿನ್ನೆಲೆ**

17ನೇ ಶತಮಾನದ ಮಧ್ಯ ಭಾಗದಲ್ಲಿ ಆಂಗ್ಲೋ ಮೈಸೂರು ಯುದ್ಧಗಳು ಪ್ರಾರಂಭವಾದ ಸಮಯ, ಟಿಪ್ಪು ಸುಲ್ತಾನನು ಆ ಭಾಗದಿಂದ 71 ಪಾಳೇಯ ಪಟ್ಟುಗಳನ್ನು ಗೆದ್ದುಕೊಂಡು, ಹೈದರಬಾದ್ ಕರ್ನಾಟಕದ ಕಡೆ ತನ್ನ ಸವಾರಿಯನ್ನು ಪ್ರಾರಂಭ ಮಾಡುತ್ತಾನೆ. ಈ ಭಾಗದ ಇಂದಿನ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಮಾಟೂರು ಎಂಬ ಗ್ರಾಮಕ್ಕೆ ದಂಡೆತ್ತಿ ಬರುತ್ತಾನೆ. ಮಾಟೂರು ಗ್ರಾಮ ಅಂದಿಗೆ ತುಂಬಾ ಶ್ರೀಮಂತಿಕೆಯಿಂದ ಕೂಡಿದ ಪ್ರದೇಶವಾಗಿತ್ತು. ಆ ಊರಿನಲ್ಲಿ ತುಂಬಾ ಭಕ್ತಿಯಿಂದ, ಧಾರ್ಮಿಕ ನಂಬಿಕೆಗಳಿಂದ ನಿಷ್ಠೆಯಿಂದ ದೈವ ಆಚರಣೆಗಳನ್ನು ಮಾಡುತಿದ್ದರು. ಅಲ್ಲಿ ಪಾಮಣ್ಣ, ನಾಗಪ್ಪ, ತಿಮ್ಮಣ್ಣ ನಾಯಕರು ಎಂಬ ಮೂರು ಜನ ದೈವ ಸಂಬೂತರು ಇದ್ದರು. ಅವರು ಆ ಗ್ರಾಮಕ್ಕೆ ತಮ್ಮ ಶಕ್ತಿಯಿಂದ ಯಾವ ತೊಂದರೆಯಾಗದಂತೆ ಊರನ್ನು ಕಾಪಾಡುತಿದ್ದರು. ಹೀಗಿರುವಾಗ ಟಿಪ್ಪುವು ಮೈಸೂರು ಭಾಗದಿಂದ ಹಲವಾರು ಪ್ರದೇಶಗಳನ್ನು ಗೆದ್ದುಕೊಂಡು ಈ ಪ್ರದೇಶದತ್ತ ತನ್ನ ಸವಾರಿ ಬರುತ್ತದೆ. ಬಂದು ಈ ಊರಿಗೆ ಪ್ರವೇಶ ಮಾಡಬೇಕು ಎನ್ನುವಷ್ಟರಲ್ಲಿ ಒಂದು ವಿಚಿತ್ರ ಘಟನೆ ಎದುರಾಗುತ್ತದೆ.

ತನ್ನ ಕುದುರೆ ಸವಾರಿ ಮೂಲಕ ಊರನ್ನ ಪ್ರವೇಶ ಮಾಡಬೇಕು, ಎನ್ನುವಷ್ಟರಲ್ಲಿ ಬೆಂಕಿಯು ಅವನಿಗೆ ಅಡ್ಡವಾಗಿ ತಡೆಯುತ್ತಿತ್ತು, ಯಾವ ಮಾರ್ಗದ ಮೂಲಕ ಹೋದರು, ಅವರಿಗೆ ಪ್ರವೇಶ ಕಷ್ಟ ಸಾಧ್ಯವಾಯಿತು. ಅನೇಕ ಸವಾರರ ಜೊತೆಗೂಡಿ ಬಂದ ಟಿಪ್ಪುವು, ನಿರಾಶಾದಾಯಕನಾಗಿ ಅವಮಾನಗೊಂಡಂತೆ ಚಿಂತಾಕ್ರಾಂತನಾದ, ಪಕ್ಕದ ಜಮೀನಿನಲ್ಲಿ ಒಬ್ಬ ಅಜ್ಜಿ ಹೊಲದ ಕೆಲಸದಲ್ಲಿ ನಿರತಳಾಗಿದ್ದಳು, ಅದನ್ನು ನೋಡಿದ ಅವರು ಹೇ.... ಅಜ್ಜಿ ನಾವು ಈ ಗ್ರಾಮಕ್ಕೆ ಹೋಗಬೇಕು, ನಾವು ಹೋಗಲು ಪ್ರಯತ್ನಿಸಿದರೆ ಬೆಂಕಿ ನಮ್ಮನ್ನ ಅಡ್ಡಿ ಪಡಿಸುತ್ತಿದೆ ಏನು ಇದು ವಿಚಿತ್ರ? ಯಾಕೆ ಹೀಗೆ ಎಂದು ಕೇಳಿದ, ಅಜ್ಜಿ ನಗುತ್ತಾ ಅಯ್ಯೋ ಮೂರ್ಖರೆ, ಸದಾ ಒಳಿತನ್ನ ಬಯಸುವ ನೆಲಕ್ಕೆ ಕೆಡಕುಂಟು ಮಾಡಲು ಹೋರಟಿರುವ ನಿಮಗೆ ದಾರಿಯಾದರು ಹೇಗೆ ಬಿಟ್ಟಿತ್ತು ಎಂದು ಜೋರಾಗಿ ಅಪಹಾಸ್ಯದ ನಗು ನಕ್ಕಳು, ಇದರಿಂದ ಕೋಪಗೊಂಡ ಟಿಪ್ಪುವು ಸೇವಕರ ಸಹಾಯದಿಂದ ಅಜ್ಜಿಯನ್ನು ಹಿಡಿದುಕೊಂಡು ಹೇಳದಿದ್ದರೆ ನಿನ್ನ ಹೆಣ ಬೀಳುತ್ತದೆ ಎಂದು ಹೆದರಿಸಿದರು. ಭಯಗೊಂಡ ಅಜ್ಜಿಯು, ನೋಡಿ ಈ ಭೂಮಿಯಲ್ಲಿ, ಪಾಮಣ್ಣ ನಾಯಕ, ತಿಮ್ಮಣ್ಣ ನಾಯಕ, ನಾಗಪ್ಪ ನಾಯಕ ಅಂತ ಮೂರು ಜನ ಅಣ್ಣ ತಮ್ಮರಿದ್ದಾರೆ ಅವರು

ಆ ಶಿವನ ಪರಮಾತ್ಮರು ಈ ಪ್ರದೇಶಕ್ಕೆ ಅವರ ಕಾವಲಿದೆ, ಆದ್ದರಿಂದ ಇಲ್ಲಿನ ಪ್ರದೇಶಕ್ಕೆ ಯಾವ ತೊಂದರೆ ಬರದಂತೆ ಶ್ರೀಮಂತಿಕೆಯಿಂದ ಕೂಡಿರಲು ಅವರ ದೈವ ಶಕ್ತಿ ಪ್ರಮುಖವಾದದ್ದು, ಅದಕ್ಕೆ ನೀವು ಕೆಟ್ಟ ಕಾರ್ಯದ ನಿಮಿತ್ಯ ಈ ಊರಿಗೆ ಹೋಗುತ್ತಿರುವುದರಿಂದ ಅವರ ಶಕ್ತಿ ಬೆಂಕಿಯಾಗಿ ನಿಮಗೆ ಅಡ್ಡಿಪಡಿಸುತ್ತಿದೆ. ಅವರನ್ನು ಗೆಲ್ಲಲ್ಲು ಅಷ್ಟು ಸುಲಭದ ಮಾತಲ್ಲ ಅವರನ್ನ ನೀವು ನೋಡಬೇಕಾದರೆ ಸಂಹಾರ ಮಾಡಬೇಕಾದರೆ, ಊರ ಹೊರಗಿನ ಕಳ್ಳಿಯ ಗಿಡಗಳ ಸಾಲಿನ ಮಧ್ಯದಲ್ಲಿ ಮೂರು ಜನ ಧ್ಯಾನದಲ್ಲಿ ನಿರತರಾಗಿರುತ್ತಾರೆ. ನೀವು ಅವರನ್ನ ನೇರವಾಗಿ ಸಂಹಾರ ಮಾಡಲು ಸಾಧ್ಯವಾಗುವದಿಲ್ಲ. ಅವರ ಬೆನ್ನಿನ ಹಿಂದಿನ ದಿಕ್ಕಿಗೆ ಸಾಗಿ ಸಂಹಾರ ಮಾಡಬಹುದು ಎನ್ನುವ ಸಲಹೆ ಕೊಟ್ಟಳು .

ಇದನ್ನು ತಿಳಿದ ಟಿಪ್ಪು ಮತ್ತು ಆತನ ಸವಾರರು, ಊರ ಹೊರಗಿನ ದಕ್ಷಿಣ ದಿಕ್ಕಿನಿಂದ ಸಂಚು ಹಾಕಿ ಅವರ ಶಿರಗಳನ್ನು ಕತ್ತಿರಿಸಿ ಹಾಕುತ್ತಾನೆ. ಅವರುಗಳ ಶಿರಗಳು ಇಂದಿಗೂ ಕಲ್ಲಿನ ರೂಪದಲ್ಲಿರುವ ಬಂದೂಕು, ವೀರಗಲ್ಲುಗಳು,  ಸಾಕ್ಷಿಯಾಗಿವೆ. ಅವರು ಮೂರು ಜನ ಟಿಪ್ಪುವಿನ ಜೊತೆ ಹೋರಾಡಿದ ಸ್ಮರಣಾರ್ಥ ಮಾಟೂರಿನಲ್ಲಿ ಒಬ್ಬ ಬಂದೂಕು, ಒಬ್ಬ ಬಿಲ್ಲು ಇನ್ನೊಬ್ಬ ಬಂದೂಕು ಹಿಡಿದಿರುವ ವೀರಗಲ್ಲುಗಳನ್ನು ನಾವು ಇಂದಿಗೂ ಕಾಣಬಹುದು. ಇವುಗಳನ್ನ ಅಲ್ಲಿನ ಆತನ ಆರಾಧಕರು, ಪೂಜಿಸುತ್ತಾ ಬಂದಿದ್ದಾರೆ. ಆ ಮೂವರಲ್ಲಿ ಒಬ್ಬರಾದ ಪಾಮಣ್ಣ ನಾಯಕನಿಂದಲೇ ಮಾಟೂರಣ್ಣ ಅಂತ ಹೆಸರು ಬೆಳಕಿಗೆ ಬಂತು, ಆತನ ಆರಾಧಕರು ಅಂದಿನ ಕಾಲಘಟ್ಟದಲ್ಲಿ ಸುತ್ತಲಿನ ಹಲವಾರು ಪ್ರದೇಶಗಳಿಗೆ ಸಾಗಿ ಹೋದ ಜಾಗದಲ್ಲಿ ಆತನ ಗುಡಿ ಕಟ್ಟಿ ಆರಾಧಿಸಲು ಪ್ರಾರಂಭ ಮಾಡಿದರು. ಅವುಗಳನ್ನು ಈ ಕನಕಗಿರಿ ಪರಿಸರದಲ್ಲಿ ಕಾಣಬಹುದು ಅವುಗಳಲ್ಲಿ ಪ್ರಮುಖವಾದ ದೈವವೇ ಈ ಮಾಟೂರಣ್ಣ.

***"ಮಾಟುರಣ್ಣನೇ ನಿನಗೆ ಎಸಾರ ನೆಲೆಬೇಕು***
***ನೂರೊಂದು ಸ್ಥಾನವ ದೊರಕಲು***
***ನಮ್ಮಗೆಲ್ಲ ಹಾದಿಯು ನೀನೇ ಅಂತ್ಯವು ನೀನೆ***
***ಆ ನೂರಂದು ಜಗದೊಳಗೆ"***

ಬೇರೆ ಬೇರೆ ಪ್ರದೇಶಗಳಿಗೆ ಸಾಗಿ ಬಂದ ಆತನ ಆರಾಧಕರು ಈ ಭಾಗದ ಅನೇಕ ಕಡೆ ನೆಲೆ ನಿಂತರು, ಅಂತಹ ಒಂದು ಪ್ರಸಿದ್ಧ ಸಾಂಸ್ಕೃತಿಕ ನೆಲೆಯೇ ಕನಕಗಿರಿ, ಇತನ 101 ನೆಲೆಗಳು ಈ ಭಾಗದಲ್ಲಿ ಪಸರಿಸಿವೆ ಎನ್ನುವುದಕ್ಕೆ ಮೇಲಿನ ಕಾವ್ಯವೇ ಸಾಕ್ಷಿಯಾಗಿವೆ.

**ಮಾಟೂರಣ್ಣನ ಜೀವನ**

ಸುಮಾರು ಕ್ರಿ.ಶ 1650ರಲ್ಲಿ ಇಂದಿನ ರಾಯಚೂರ ಜಿಲ್ಲೆಯ ಸಿಂದನೂರು ತಾಲೂಕ್ಕಿನ ಮಾಟೂರು ಎಂಬ ಗ್ರಾಮದಲ್ಲಿ, ಭೋರನಾಯಕ ಮತ್ತು ಮಾಳಮ್ಮ ಎಂಬ ದಂಪತಿಗೆ ಪಾಮಣ್ಣ ನಾಯಕ, ನಾಗಪ್ಪ ನಾಯಕ, ತಿಮ್ಮಣ್ಣ ನಾಯಕ ಎಂಬ ಮೂರು ಜನ ಗಂಡು ಮಕ್ಕಳು, ಯಂಕಮ್ಮ ಎಂಬ ಒಬ್ಬ ಹೆಣ್ಣು ಮಗಳು ಜನಿಸುತ್ತಾರೆ. ಹುಟ್ಟಿನಿಂದಲೇ ದೈವ ಸಂಭೂತರಾದ ಇವರು, ಧಾರ್ಮಿಕ ಆಚರಣೆ ನಂಬಿಕೆಗಳಲ್ಲಿ ದೇವರ ಮೇಲೆ ಅಪಾರವಾದ ಶ್ರದ್ಧೆಯಿಂದ ಧ್ಯಾನಕ್ಕೆ ಮೋರೆ ಹೋಗುತ್ತಿದ್ದರು. ಇವರು ಮೂಲತಃ ತಳ ಸಮುದಾಯದ ಬೇಡ ಜನಾಂಗದವರು, ಅಂದರೆ ಇಂದಿನ ವಾಲ್ಮೀಕಿ ಸಮುದಾಯ. ಮೂರು ಗಂಡು ಮಕ್ಕಳಲ್ಲಿ ಒಬ್ಬರಾದ ಪಾಮನಾಯಕನಿಂದಲೇ ಈ ಗ್ರಾಮಕ್ಕೆ ಮಾಟೂರು ಎಂಬ ಹೆಸರು ಬರಲು ಕಾರಣವಾಯಿತು.

**ಮಾಟೂರಣ್ಣ ದೈವದ ವಾರ್ಷಿಕ ಆಚರಣೆಗಳು**

ಕನಕಗಿರಿಯಲ್ಲಿ ನಡೆಯುವ ಈ ಒಂದು ಜನಪದ ದೈವದ ವಾರ್ಷಿಕ ಹಬ್ಬಗಳು ಪ್ರಮುಖವಾಗಿ ನಾಲ್ಕು. ಒಂದು ವರ್ಷದ ಮೊದಲ ತಿಂಗಳ ಹಬ್ಬ ಮಹಾಶಿವರಾತ್ರಿ ನಂತರ ಯುಗಾದಿ ಹಬ್ಬದ ಶ್ರಾವಣ ಮಾಸದ ನಡುವಿನ ಸೋಮವಾರ, ದಸರ ಹಬ್ಬ. ಈ ನಾಲ್ಕು ಹಬ್ಬಗಳು ಕನಕಗಿರಿಯಲ್ಲಿ ನಡೆಯುವ ವಿಶೇಷ ಆಚರಣೆಗಳಾಗಿವೆ. ಯಾಕೆಂದರೆ ಒಂದೊಂದು ಹಬ್ಬದಲ್ಲೂ ಒಂದು ವಿಶೇಷವಾದ ಅರ್ಥಪೂರ್ಣವಾದ ಮಾಹಿತಿ ಜನಪದರ ನಂಬಿಕೆಗೆ ಸಿಗುತ್ತದೆ.

**ಮಹಾಶಿವರಾತ್ರಿ**

ಶಿವರಾತ್ರಿ ಹಬ್ಬದಲ್ಲಿ ಹಲವಾರು ರೀತಿಯ ಅಲಂಕಾರಗಳಿಂದ ದೇವರನ್ನು ತಯಾರಿಸಿ ದೇವಸ್ಥಾನದಿಂದ ಊರ ಹೊರಗೆ ಇರುವ ಹಳ್ಳಕ್ಕೆ ಅನೇಕ ಭಕ್ತ ಸಮೂಹಗಳಿಂದ ಮೆರವಣಿಗೆ ಸಾಗಿ ಗಂಗಾ ಮಾತೆಗೆ ಪೂಜೆ ಮಾಡಿ ಮರಳಿ ದೇವಸ್ಥಾನದ ಹತ್ತಿರ ಬಂದು ದೇವಾಲಯವನ್ನು ಐದು ಸುತ್ತು ಪ್ರದಕ್ಷಿಣೆ ಹಾಕಿ, ನಂತರ ಎಲ್ಲರೂ ನಿಶಬ್ದವಾಗಿ ದೇವರ ಕಾರಣಿಕವನ್ನು ಆಲಿಸುತ್ತಾರೆ. ಅದು ಮುಂದಿನ ಕೃಷಿಕ ಜೀವನದ ಬಗೆಗೆ ದೇವರು ಹೇಳುವ ಮಾತುಗಳು, ಕೃಷಿಕನ ಜೀವನದಲ್ಲಿ ನಡೆಯುವ ಹಲವಾರು ವಿಚಾರಗಳನ್ನು ಇಟ್ಟುಕೊಂಡು, ಮಳೆ ಬೆಳೆ ವಿಚಾರದ ಕುರಿತಂತೆ, ಹೇಳಿಕೆ, ಹೇಳುತ್ತಾರೆ. ಈ ಸಂದರ್ಭದಲ್ಲಿ ಪೂಜಾರಪ್ಪನ ಮೈಯಲ್ಲಿ ಮಾಟೂರಣ್ಣ ದೈವವು ಪ್ರವೇಶ ಮಾಡಿ ಈ ತರಹದ ನಂಬಿಕೆಗೆ ಸಾಕ್ಷಿಯಾಗಿದೆ. ಇದು ಇಲ್ಲಿನ ವಿಶೇಷವಾದ ಆಚರಣೆಯಲ್ಲಿ ಒಂದು.

**ಯುಗಾದಿ ಅಮವಾಸ್ಯೆ**

ಇದು ಕೂಡ ಒಂದು ವಾರ್ಷಿಕ ಆಚರಣೆಯಲ್ಲಿ ನಡೆಯುವ ಬಹುದೊಡ್ಡ ಹಬ್ಬವಾಗಿದೆ ದೇವರಿಗೆ ಎಲೆ ಚಟ್ಟೆ ಏರಿಸುವುದರ ಮೂಲಕ ಪ್ರಾರಂಭಿಸುವ ತಯಾರಿ ಕುಂಕುಮಾರ್ಚನೆ, ಬಿಲ್ವ ಪತ್ರಿ ದಾರಣೆಯಾಗಿ ದೇವಸ್ಥಾನದಿಂದ ಪಲ್ಲಕ್ಕಿಯ ಮೂಲಕ ಸಾಗುವ ಮೆರವಣಿಗೆ ಗುಡಿಯ ಸುತ್ತಲು ಐದು ಸುತ್ತು ಪ್ರದಕ್ಷಿಣೆ ಹಾಕಿ ಸಡಗರದಿಂದ ಸಾಗಿ ಕೊನೆಗೆ ಮೌನವಾಗಿ ದೇಶದ ರಾಜಕೀಯ ವಿಚಾರಗಳ ಕುರಿತು, ಕಾರುಣಿಕ ನಡೆಯುತ್ತದೆ. ಯಾವತ್ತು ಕೂಡ ಮಾತುಗಳು ಹುಸಿಯಾಗಿಲ್ಲ ಎನ್ನುವುದು ಜನಪದರ ನಂಬಿಕೆ.

**ದಸಾರ**

ಮೈಸೂರಿನ ಜಂಬೂ ಸವಾರಿಯಂತೆ ಕನಕಗಿರಿಯ ಈ ಜನಪದ ದೈವದ ಸವಾರಿ ತುಂಬಾ ವಿಜೃಂಭಣೆಯಿಂದ ದಿಶಿಬಿ ದಿಂಡಿನ ಮೇಲೆ ಬೆಳ್ಳಿಯ ಮೂರ್ತಿಯಿಂದ ರಾರಾಸುತ್ತಿರುವ ಮೂರ್ತಿಯನ್ನು ಕೂಡಿಸಿ ದೇವಸ್ಥಾನದಿಂದ ಬನ್ನಿ ಮಹಾಂಕಾಳಿಯ ದೇವಸ್ಥಾನಕ್ಕೆ ಸಾಗಿ ಬನ್ನಿ ಮೂಡಿಯುವುದರ ಮೂಲಕ ಸರ್ವರಿಗೂ ಒಳಿತನ್ನು ಬಯಸಿ ಪೂಜೆ ಕೈಗೊಂಡು ಶಿವರಾತ್ರಿಯಲ್ಲಿ ಹೇಳಿದ ಮಾತುಗಳ ಸತ್ಯಾ ಅಸತ್ಯಗಳ ಬಗ್ಗೆ ಅವಲೋಕನವಾಗಿ ಕಾರುಣಿಕ ನಡೆಯುತ್ತದೆ.

**ಶ್ರಾವಣ ಮಾಸ**

ಇದು ಶ್ರಾವಣ ಮಾಸದ ನಡುವಿನ ಸೋಮವಾರ ನಡೆಯುವ ಪ್ರಮುಖವಾದ ಹಬ್ಬವಾಗಿದೆ. ಇಲ್ಲಿಯು ಕೂಡ ದೇವರ ಮೂರ್ತಿಯನ್ನು – ಪಲ್ಲಕ್ಕಿಯ ಮೂಲಕ ಹೊರ ಬಂದು ಪ್ರದಕ್ಷಿಣೆ ಹಾಕಿ,

ತುಂಬಾ ವೈಭವದಿಂದ ಜಾತ್ರೆ ನಡೆಯುತ್ತದೆ. ಆದರೆ ಈ ಹಬ್ಬದಲ್ಲಿ ತಾಯಿಯಾದ ಮಾಳಮ್ಮ ದೈವದ ಮೂರ್ತಿಯನ್ನು ಆರಾಧಿಸಿ ನಾಡಿನ ಆರ್ಥಿಕವಾದ ಜಾಗತಿಕ ವಿಷಯದ ಮಾಲೆ ಕಾರುಣಿಕ ನಡೆಯುತ್ತದೆ.

**ಮಾಟೂರಣ್ಣ ದೈವದ ಹೇಳಿಕೆ/ಕಾರುಣಿಕ**

ವಾರ್ಷಿಕ ಹಬ್ಬಗಳಲ್ಲಿ ನಡೆಯುವ ಹೇಳಿಕೆಯು ಇಲ್ಲಿನ ಜನಪದರ ಗಟ್ಟಿಯಾದ ನಂಬಿಕೆಯಾಗಿದೆ. ಪ್ರತಿವರ್ಷ ನಡೆಯುವ ಹೇಳಿಕೆಗಳು ಜನರ ಜೀವನ, ದೇಶದ, ರೈತರ, ರಾಜಕೀಯ ವಲಯವನ್ನು ಉದ್ದೇಶಿಸಿ ನುಡಿಯುವ ಹೇಳಿಕೆಗಳಾಗಿವೆ ಸುಮಾರು 600 ವರ್ಷಗಳ ಇತಿಹಾಸ ಹೊಂದಿದ ಈ ಕಾರುಣಿಕ ಇಂದಿಗೂ ಜೀವಂತವಾಗಿದೆ. ಅಂತಹ ಹೇಳಿಕೆಗಳಲ್ಲಿ ಅಧ್ಯಯನದ ಅಥವಾ ಲೇಖನದ ದೃಷ್ಟಿಯಿಂದ ಕೆಲವು ಹೇಳಿಕೆಗಳನ್ನು ಕೂಡಲಾಗಿದೆ.

**ಬೆಳಕು ಹರಿಯಾಕ ಬಾಳದೂರಿಲ್ಲ, ಕೋಳಿ ಕೂಗಿದವನೇ ಜಾಣ**

ಈ ಒಂದು ಕಾರುಣಿಕಕ್ಕೆ ನಮ್ಮ ಜನಪದರು ಯಾವ ರೀತಿಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ ಎಂದರೆ, ಬೆಳಕು ಹರಿಯಾಕ ಬಾಳ ದೂರಿಲ್ಲ ಅಂದರೆ ರಾಜಕೀಯ ವಿಚಾರವನ್ನು ಕುರಿತು ಮತದಾನ' ದೂರ ಇಲ್ಲಾ ಮಾದ್ಯಮಗಳು ಅತಿ ಹೆಚ್ಚು ಪ್ರಚಾರ ಪಡಿಸುವ ವ್ಯಕ್ತಿ ವಿಜಯ ಶಾಲಿಯಾಗುತ್ತಾನೆ ಎನ್ನುವುದನ್ನು ತಿಳಿಸುತ್ತದೆ. ಇದು ಅಂದಿನ ಭಾರತೀಯ ಜನತಾಪಕ್ಷದ ವಿಜಯದ ಸಂಕೇತವಾಗಿ ಈ ಕಾರುಣಿಕ ವಾಸ್ತವದಲ್ಲೂ ನಿಜವಾದ ನಂಬಿಕೆಯಾಗಿದೆ ಎಂದು ಜನಪದರ ಮಾತು.

**ಬೆಳಕು ಹರಿಯಾಕ ದೂರಿಲ್ಲ: ಎಲೆಕ್ಷನ್ ದೂರ ಇಲ್ಲ**

ಕೋಳಿ ಕೂಗಿದವನೇ ಜಾಣ: ಮಾದ್ಯಮಗಳ ಪ್ರಚಾರ ಪಡಿಸುವ ವ್ಯಕ್ತಿ ಈ ರೀತಿಯಾಗಿ ಒಂದು ಕಾರುಣಿಕವು ಕೋಳಿಯನ್ನು ಮಾದ್ಯಮಕ್ಕೆ ಹೋಲಿಸಿ ಕೂಗಿದವನೇ ಜಾಣ ಎಂದರೆ ಮಾದ್ಯಮಗಳು ಹೇಳುವ ಪ್ರಕ್ರೀಯಗೆ ಕೂಗಿದವನೇ ಎನ್ನುವ ಹೋಲಿಕೆ ಮಾಡಿ ಜಾಣ ಎಂದರೆ ಗೆಲ್ಲುವವನು ಎನ್ನುವ ಅರ್ಥದಲ್ಲಿ ಈ ಕಾರುಣಿಕವನ್ನು ಜನಪದರು ವಿಶ್ಲೇಷಿಸಿದ್ದಾರೆ.

**'ಹಾವು ಅಡವಿ ಸೇರುತ್ತಾ ಗುಬ್ಬಿಗೂಡು ಸೇರುತ್ತಾ, ಕಾಗೆ ವನವಾಸ ಸೇರುತ್ತಾ'**

ಈ ರೀತಿಯಾಗಿ ಹೇಳಿಕೆ ಕರೋನ ಬರುವ ಒಂದು ವರ್ಷದ ಮುಂಚೆಯೇ ಕರೋನ ರೋಗದ ಕುರಿತು ಈ ರೀತಿಯ ನುಡಿದದ್ದು ಈ ಸಂದರ್ಭದಲ್ಲಿ ಬಹಳ ಸೂಕ್ಷ್ಮವಾಗಿ ಅರ್ಥವಾಗುತ್ತದೆ. ಅದರ ವಿವರಣೆ ನೋಡುವುದಾದರೆ, ಹಾವು ಅಡವಿ ಸೇರುತ್ತೇ, ಅನ್ನೊದು, ರಾಜಕೀಯ ವ್ಯಕ್ತಿಗಳು ಒಂದು ಕಡೇ ನೆಲೆಸುವಂತಹದ್ದು, ಗುಬ್ಬಿ ಗೂಡು ಸೇರುತ್ತಾ, ಅನ್ನೋದು ಕಾರ್ಮಿಕ ವರ್ಗ ದುಡಿಯಲು ಬೇರೆ ನಗರಗಳಿಂದ ಹೋದವರು ಕರೋನ ಸಂದರ್ಭದಲ್ಲಿ ಮರಳಿ ಹಳ್ಳಿಗಳ ಕಡೆ ಮುಖ ಮಾಡಿದ್ದು, ಗುಬ್ಬಿ ಗೂಡು ಎನ್ನುವುದು, ಇನ್ನ ಕಾಗೆ ವನವಾಸ ಸೇರುತ್ತಾ ಅನ್ನುವುದು ಕರೋನದಿಂದ ಮರಣ ಹೊಂದಿ ಮೃತದೇಹಗಳು ಅನುಭವಿಸಿದ ಪಾಡಿಗೆ ವನವಾಸದಂತೆ ಈ ಹೇಳಿಕೆಯನ್ನ ವಿಶ್ಲೇಷಿಸಿದ್ದಾರೆ

**'ಮುತ್ತಿನಂತ ಚೆಂಡು ಬೆಳಕು ಹರಿಯುವುದರೊಳಗ ಹಾರಿ ಹೋಗುತ್ತಾ'**

ಈ ಹೇಳಿಕೆ ನಿಜಕ್ಕೂ ಎಲ್ಲರಿಗೂ ಅಚ್ಚರಿಯನ್ನುಂಟು ಮಾಡಿರುವಂತಹದ್ದು, ಯಾಕೆಂದರೆ ಈ ದೇಶದ ಪ್ರದಾನಿ 1984 ಅಕ್ಟೋಬರ್ 31ರಂದು ಹತ್ಯೆಗಿಡಾದರು. ಇದು ನಡೆಯುವ ಹಿಂದಿನ ದಿನ ಈ ಹಬ್ಬದಲ್ಲಿ ಈ

ಹೇಳಿಕೆಯನ್ನ ಹೇಳಲಾಯಿತು. ಜನರಿಗೆ ಅಂದು ರಾತ್ರಿ ಈ ಮಾತಿನ ಅರ್ಥ ಯಾವುದೋ ಕೆಟ್ಟ ಘಟನೆಗೆ ಸಾಕ್ಷಿಯಾಗುತ್ತದೆ ಎಂದು ಭಾವಿಸಿದ್ದರು. ಅದರ ನೀರಿಕ್ಷೆಯಂತೇಯೇ ಈ ದೇಶದ ಮಹಿಳಾ ಪ್ರದಾನಿ ಇಂದಿರಾಗಾಂಧಿಯನ್ನು ಹತ್ಯ ಮಾಡಲಾಯಿತು. ಇಂದಿರಾ ಗಾಂಧಿಯವರನ್ನು ಮುತ್ತಿನ ಚೆಂಡಿಗೆ ಹೋಲಿಸಿದ್ದಾರೆ. ದೇಶದ ಪ್ರಧಾನಿ ಅಂದರೆ ಒಂದು ಮುತ್ತಿನಂತೆ ಎಂಬುವದು ನಮ್ಮ ಜನಪದರ ಮಾತಗಿದೆ

**ಅಣ್ಣಯ್ಯನ ಗೂಳಿ ನಡು ಬಜಾರಾದಾಗ ಮಂಡಿ ಊರುತ್ತಾ**

ಈ ನಮ್ಮ ಜನಪದ ದೈವ ಮಾಟೂರಣ್ಣ ಕನಕಗಿರಿಯ ಶ್ರೀ ಕನಕಾಚಲಪತಿಯನ್ನ ಹಿಂದಿನ ಕಾಲದಿಂದಲೂ ನಮ್ಮ ಅಣ್ಣ ಕನಕರಾಯ ಅಂತ ಕರೆಯುತ್ತಾ ಬಂದಿರುವುದು ವಾಡಿಕೆ. ಅದರಂತೆಯೇ ವಾರ್ಷಿಕ ಹಬ್ಬಗಳಲ್ಲಿ ಒಂದಾದ ಫೆಬ್ರುವರಿಯಲ್ಲಿ ನಡೆಯುವ ಮಹಾಶಿವರಾತ್ರಿಯಲ್ಲಿ ಕನಕರಾಯನ ಜಾತ್ರೆಯ ಕುರಿತಾಗಿ ಮಾಟೂರಣ್ಣ ಹೇಳಿಕೆ ಹೇಳುವುದು ಹಿಂದಿನಿಂದಲೂ ನಡೆದುಕೊಂಡು ಬಂದ ಸಂಪ್ರದಾಯವಾಗಿದೆ. ಅದರ ಪ್ರಕಾರವಾಗಿ ಶಿವರಾತ್ರಿಗೆ ಕನಕರಾಯನ ಜಾತ್ರೆ ಒಂದು ತಿಂಗಳು ಮುಂದಿರುತ್ತದೆ. ಅಂದರೆ ಮಾರ್ಚ ತಿಂಗಳಲ್ಲಿ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಕನಕರಾಯನ ರಥ ಶಿರ ಎತ್ತಿ ನೋಡಬೇಕು ಅಷ್ಟು ಎತ್ತರದ ರಥ ಉತ್ತರ ಕರ್ನಾಟಕ ಭಾಗದ ಅತಿ ಎತ್ತರದ ರಥ ಎನ್ನುವ ಕೀರ್ತಿ ಕನಕರಾಯನ ರಥಕ್ಕೆ ಇದೆ. ಅದಕ್ಕೆ ಇದನ್ನು ನಮ್ಮ ಜನಪದರು ಗೂಳಿಗೆ ಅರ್ಥ ಹೋಲಿಸಿ ಮಾಟೂರಣ್ಣನ ಹೇಳಿಕೆಗೆ ಹೊಂದಿಸಿದ್ದಾರೆ.

ಅಂದು 1993ರ ಕನಕಗಿರಿಯ ಆರಾಧ್ಯ ದೈವ ಶ್ರೀಕನಕಾಚಲಪತಿಯ ಜಾತ್ರೆ ತುಂಬಾ ಅದ್ದೂರಿಯಾಗಿ ಸಾಗುತ್ತಿತ್ತು. ಜಾತ್ರೆಯಲ್ಲಿ ರಥವನ್ನು ದೇವಸ್ಥಾನದ ಮೂಲಕ ರಾಜ್ಯ ಬೀದಿಯಲ್ಲಿ ಎಳೆಯುತ್ತಿರುವಾಗ ಅಚಾನಕ್ಕಾಗಿ ರಥದ ಈರಿಸು ಮುರಿದು ರಥ ಬೀಳುತ್ತದೆ ರಥದ ಒಳಗೆ ಕೆಳಗೆ ಲಕ್ಷಾಂತರ ಜನ ಇದ್ದರೂ ಯಾರಿಗೂ ಒಂದು ಸಣ್ಣ ಪೆಟ್ಟು ಆಗದಿರುವುದು ನಿಜಕ್ಕೂ ಪವಾಡವೇ ಸರಿ ಎನ್ನುತ್ತಾರೆ ನಮ್ಮ ಜನಪದರು. ಈ ರೀತಿಯಾಗಿ ನಡೆದ ಈ ಒಂದು ಘಟನೆಯನ್ನು ಮಾಟೂರಣ್ಣನ ಹೇಳಿಕೆಗೆ ಸಮೀಕರಿಸಿ ಅಣ್ಣಯ್ಯ ಅಂದರೆ ಕನಕರಾಯ, ಗೂಳಿ ಎಂದರೆ ರಥ ನಡು ಬಜಾರ ಎಂದರೆ ರಾಜ ಬೀದಿಯ ಮದ್ಯ ಮಂಡಿ ಊರುತ್ತದೆ ಎನ್ನುವುದನ್ನು ಬೀಳುತ್ತದೆ ಎಂದು ಬಹಳ ವಿಮರ್ಶಾತ್ಮಕವಾಗಿ ಈ ಒಂದು ಹೇಳಿಕೆಯನ್ನು ನಂಬಿಕೊಂಡು ಇಂದಿಗೂ ಅಂತಹ ಆಚರಣೆಗಳನ್ನು ನಡೆಸುತ್ತಾ ಬಂದಿದ್ದಾರೆ.

**ಮಾಟೂರಣ್ಣನ ಕಾವ್ಯಗಳು:**

***ಬದುಕಿನ ಅಂತರವ ಶೂನ್ಯವ ಮಾಡಿ***
***ಸಾಧಿಸಿ ತೋರಿದ ನಿನ್ನ ಪೌರುಷಕ್ಕೆ***
***ಲೋಕದೊಳಗೆ ಸರಿ ಸಾಟಿ ಯಾರು ಇಲ್ಲವೋ***
***ಮಾಟೂರಣ್ಣನೇ ಮಾಟೂರಣ್ಣನೆ***

***ಬದುಕಲು ಭವ ಕಟ್ಟಿ ಮಾನವ ಕುಲವ***
***ರಕ್ಷಿಸಿದೆ ವೀರನಂತೆ ಹೋರಾಡಿ***
***ಜಗದೊಳಗೆ ಬೆಳಕಾಗಿ ಅಂದಕಾರವ***

*ಕಳೆದೆಯೋ ಮಾಟೂರಣ್ಣ*
*ಮಾಟೂರಣ್ಣನೇ ನೀನಗೆ ಎಸಾರ ನೆಲಬೇಕು*
*ನೂರೊಂದು ಸ್ಥಾನವ ದೊರಕಲು*
*ನಮಗೆಲ್ಲ ಹಾದಿಯು ನೀನೇ ಅಂತ್ಯವು ನೀನೆ*
*ಆ ನೂರಂದು ಸ್ಥಳದೊಳದಗೆ*
*ವೀರ ಮರಣವ ಹೊಂದಿ*
*ಕಾಣದೇ ಹಸಿವು ನಿವಾರಿಸಿದ ಗುರುವೇ*
*ಬದುಕಿದಂತೆ ನಟಿಸಿ ತಂದೆ ತಾಯಿಯರ*
*ಗುರುವಾದೆಯೇ? ಮಾಟೂರಣ್ಣ*

*ಕಳ್ಳಿಯ ಸಾಲೋಳಗೆ ನುಸುಳಿದ*
*ಕ್ರೂರರಿಗೆ ಮೋಸಾದಿ ಬಲಿಯಾದೆಯಲ್ಲೋ*
*ವೀರ ಪುರುಷ ಮಾಟೂರಣ್ಣ*

*ಲೋಕಕ್ಕೆಲ್ಲ ಕಣ್ಣನಾಗಿರುವ ಶಿವನಿಗೆ*
*ಕಣ್ಣು ನೀಡಿ ರಕ್ತ ಸುರಿಸಿ*
*ವರವ ಪಡೆದೆಯಲ್ಲೋ ಬೇಡರ ಕನ್ನಯ್ಯ*
*ಬಸವಾದಿ ಶರಣರ ಕಥನವಾ*
*ಕೇಳಿ ಅವರಿಗೆ ಸಮನಾಗಿ*
*ಬದುಕಿದೆಯೇ ವೀರ*
*ಹಾಲು ತುಪ್ಪವ ಎರೆದವಾ*
*ಮನುಕುಲವ ಕಾಪಾಡೊ*
*ಆಧಾರದ ವಿರನೇ ಮಾಟೂರಣ್ಣ*

*ಅಣ್ಣನ ಕಾಯಕವ ತಮ್ಮನು*
*ಮಾಡಿದರೆ, ತಮ್ಮನ ಕೆಲಸವಾ*
*ಮಾಯಕ್ಕೆ ಮಾಡಿದಲೋ*
*ಹಾಲು ಮತದ ಮಡಿಯಿಂದ*
*ಮಾಡಿವಾಳರ ಮಡಿಯಿಂದ*
*ಡೋಲು ನುಡಿತಾವೋ ಮಾಟೂರಣ್ಣ*

**ಮಾಟುರಣ್ಣ ದೈವದ ಕುರಿತಾದ ಒಂದು ಪವಾಡ**

ಸುಮಾರು ಎರಡು ತಲೆಮಾರಿನ ಹಿಂದೆ ಮಾಟುರಣ್ಣ ಈ ಒಂದು ದೈವದ ಆಚರಣೆಗಳಲ್ಲಿ ಒಂದಾದ ದೇವಘಾಟಿಗೆ ತೇರಳುವುದು, ಈ ಒಂದು ಹಬ್ಬದಲ್ಲಿ ಈ ದೈವವು ಕನಕಗಿರಿಯಿಂದ ಗಂಗಾವತಿಯ ಬಳಿ ದೇವಘಾಟಿಗೆ ಪಲ್ಲಕ್ಕಿ ಮೂಲಕ ಡೊಳ್ಳು ಕುಣಿತ, ಭಜನೆ ಮೇಳ ಹಾಡುಗಳ ಮೂಲಕ ಬಹಳ ಅದ್ದೂರಿಯಾಗಿ ಪಾದಯಾತ್ರೆಯ ಮೂಲಕ ಸಾಗುತ್ತದೆ. ಅದು ತುಂಬಾ ಬರಗಾಲದ ದಿನಗಳು ಜನಗಳು, ತುತ್ತು ಅನ್ನಕ್ಕೂ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿತ್ತು. ಮಳೆ ಬೆಳೆ ಇಲ್ಲದೇ ಜನ ತೀವ್ರ ನೊಂದಿದ್ದರು. ಇಂತಹ ಸಂದರ್ಭದಲ್ಲಿ ಈ ದೈವವು ಇಷ್ಟೆಲ್ಲ ವೈಭವದಿಂದ ಕನಕಗಿರಿ ಮೂಲಕ ಮೆರವಣಿಗೆ, ಗಂಗಾವತಿಯ ಪೋಲಿಸ್ ಸ್ಟೇಷನ್ ಹತ್ರ ಬಂದಾಗ ಅಲ್ಲಿರುವ ಸಿಬ್ಬಂದಿಗಳು ಅಧಿಕಾರಿಗಳು ಮೆರವಣಿಗೆಯನ್ನು ತಡೆದು ಜನರಿಗೆ ಇಷ್ಟೆಲ್ಲ ಸಮಸ್ಯೆಗಳಿವೆ. ಊಟಕ್ಕೂ ಪರದಾಡುವ ಸ್ಥಿತಿ ಇದೆ. ಅದರ ಮದ್ಯೆ ಇಷ್ಟೆಲ್ಲ ವೈಭವದಿಂದ ದುಂದು ವೆಚ್ಚ ಮಾಡಿಕೊಂಡು ಹಬ್ಬ ಮಾಡುವುದು ಎಷ್ಟು ಸರಿ! ಎಂಬ ಪ್ರಶ್ನೆ ಹಾಕಿ ನೀನು ನಿಜವಾಗಿಯೂ ದೇವರಾಗಿದ್ದರೆ, ಜನರ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಮಳೆ ಬೆಳೆ ತರಿಸು ಎಂದು ಸವಾಲು ಹಾಕಿ ಮುಂದೆ ಸಾಗಲು ಬಿಡಲಿಲ್ಲ.

ಅದರ ಪ್ರತಿಫಲವಾಗಿ ಅಂದಿನ ಪೂಜಾರಿಯವರು ಕ್ಷಣ ಕಾಲ ಪಲ್ಲಕ್ಕಿಯನ್ನು ಕೆಳಗೆ ಈಳಿಸಿ ಕಂಬಳಿಯನ್ನು ತೆಗೆದುಕೊಂಡು ಈಶಾನ್ಯ ದಿಕ್ಕಿಗೆ ಬೀಸಿದರು. ಮಳೆಯ ಹೊಡೆತಕ್ಕೆ ಗಂಗಾವತಿಯಲ್ಲಿ ಕೆರೆ ಕಟ್ಟೆಗಳು ತುಂಬಿದವಂತೆ ಅದಕ್ಕಾಗಿ ಈ ಗ್ರಾಮಕ್ಕೆ ಗಂಗಾವತಿ ಎಂದು ಹೆಸರು ಬರಲು ಕಾರಣವಾಯಿತು. ಅಂದಿನ ಆ ಘಟನೆ ಸರ್ಕಾರಕ್ಕೆ ನಿಜಕ್ಕೂ ಅಚ್ಚರಿ ತಂದಿದ್ದು, ಅಲ್ಲಿನ ಅಧಿಕಾರಿಗಳು ಲಿಖಿತವಾಗಿ ಮುಂದಿನ ನಿಮ್ಮ ಮೆರವಣಿಗೆ ಈ ಮಾರ್ಗವಾಗಿ ಯಾವಾಗಲೂ ಬಂದರೆ ನಮ್ಮ ಇಲಾಖೆಯಿಂದ ಪೂಜೆ ಮಾಡುತ್ತವೆ. ಮತ್ತು ಸೂಕ್ತವಾದ ಭದ್ರತೆಯನ್ನು ನೀಡುತ್ತೇವೆ ಎಂದು ಲಿಖಿತವಾಗಿ ಬರೆದಿದ್ದಾರೆ. ಅದರಂತೆಯೇ ಇಂದಿಗೂ ಈ ಮಾರ್ಗವಾಗಿ ಬಂದರೆ ತಪ್ಪದೇ ಆ ಮಾತಿನಂತೆ ನಡೆದುಕೊಳ್ಳುತ್ತಾರೆ.

**ವಕ್ತೃವಿವರ**

- ಶಿವಪ್ಪ ನಾಯಕ, ಮಾಟೂರು, ಕೂಲಿ, 45 ವರ್ಷ, ನಾಯಕ.
- ರುದ್ರಪ್ಪ, ಸಿಂಗನಾಳ, ಕೂಲಿ, 60 ವರ್ಷ, ಗಂಗಾಮತ.
- ಈರಮ್ಮ, ಸಿಂಗನಾಳ, ಕೂಲಿ, 56 ವರ್ಷ, ನಾಯಕ.
- ಪಕೀರಪ್ಪ, ಹೀರೆಖೆಡ, ರೈತರು, ನಾಯಕ.
- ನಿಂಗಪ್ಪ, ಕನಕಗಿರಿ, ಕೂಲಿ, 49 ವರ್ಷ, ಛಲವಾದಿ.
- ಯಮುನಪ್ಪ, ಯತ್ನಟ್ಟಿ, ಪೂಜಾರಿ, 66 ವರ್ಷ, ನಾಯಕ.
- ಪಾರ್ವತಮ್ಮ, ಕನಕಗಿರಿ, ಪೂಜಾರಿ 65 ವರ್ಷ, ಛಲವಾದಿ.

- ಪಾಮಪ್ಪ ಪೂಜಾರಿ, ಕನಕಗಿರಿ, ರೈತ, ಛಲವಾದಿ
- ನಾಗರಾಜ ಪೂಜಾರ, ಕನಕಗಿರಿ, ವಿದ್ಯಾರ್ಥಿ, 22 ವರ್ಷ,
- ಯಂಕಮ್ಮ, ಸೂಳಿಕೆರಿ, ಕೂಲಿ, 55 ವರ್ಷ, ಭೋವಿ.
- ಕಂಠೇಪ್ಪ ಗೂಂಡೂರು, ಕೂಲಿ, 40 ವರ್ಷ, ಹರಿಜನ.
- ರಾಯಪ್ಪ, ಗಂಗಾವತಿ, ಕೂಲಿ, 53 ವರ್ಷ, ಹರಿಜನ.
- ತಿಮ್ಮಣ್ಣ ಪೂಜಾರ, ಕನಕಗಿರಿ, ಕೂಲಿ, 48 ವರ್ಷ, ಛಲವಾದಿ.

**ಪರಾಮರ್ಶನ ಗ್ರಂಥಗಳು**


- ಗುರುಪ್ರಸಾದ್ ಸಿ.ಟಿ., (2005). ಏಳು ಊರಿನ ದೇವತೆಗಳು ಒಂದು ಅಧ್ಯಯನ. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಪ್ರೇಮಪಲ್ಲವಿಸಿ.ಬಿ. (20040. ಮ್ಯಾಸಬೇಡ ಬುಡಕಟ್ಟಿನ ಆರಾಧ್ಯ ದೈವಗಳು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಆಕಡೆಮಿ, ಬೆಂಗಳೂರು.
- ಬಸವರಾಜ ಸಬರದ. (2009). ಜನಪದ ದೈವಗಳು. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
- ಮಂಜುನಾಥ ಬೇವಿನಕಟ್ಟಿ (2010). ಪರಿಷೆ–ಮಾನ್ಯೇವು. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಲಕ್ಷ್ಮೀದೇವಿ. ಎಸ್. (2007). ಗ್ರಾಮ ಮತ್ತು ಶಿಷ್ಟ ದೇವತೆಗಳು. ಚಿತ್ಕಲಾ ಪ್ರಕಾಶನ, ಕುಪ್ಪಂ
- ಹನುಮಂತಪ್ಪ ತಾರಿಹಳ್ಳಿ. (2012). ಕನಕಗಿರಿ ನಾಯಕರು. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಸಿದ್ದಲಿಂಗಯ್ಯ. (1997). ಗ್ರಾಮದೇವತೆಗಳು ಜಾನಪದೀಯ ಅಧ್ಯಯನ, ಅಂಕಿತ ಪುಸ್ತಕ ಬೆಂಗಳೂರು.
- ದುರುಗಪ್ಪ ಎಂ.ಕೆ. (2010). ವಿಜಯನಗರೋತ್ತರಕಾಲಿನ ಬೇಡ ಜನಾಂಗ: ಚಾರಿತ್ರಿಕ ಅಧ್ಯಯನ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.